Karnataka Board

Mid-Term Question Paper

2024-25

aglasem.com

ಉಪನಿರ್ದೇಶಕರ ಕಾರ್ಯಾಲಯ ಶಾಲಾ ಶಿಕ್ಷಣ ಇಲಾಖೆ, ವಿಜಯನಗರ ಜಿಲ್ಲೆ

೯ನೇ ತರಗತಿ ಜಿಲ್ಲಾ ಮಟ್ಟದ ಮೊದಲನೆಯ ಸಂಕಲನಾತ್ಮಕ ಮೌಲ್ಯಮಾಪನ – ೨೦೨೪–೨೫

ಸಮಯ: ೩ ಗಂಟೆ ೧೫ ನಿ. **ವಿಷಯ : ಪ್ರಥಮ ಭಾಷೆ ಕನ್ನಡ(೦೧K)** **ಗರಿಷ್ಠ ಅಂಕಗಳು : ೧೦೦**

I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ ಕ್ರಮಾಕ್ಷರದೊಂದಿಗೆ ಬರೆಯಿರಿ. **೬x೧=೬**

೧) 'ವಿಜ್ಞಾನಿಗಳು ಸಂಶೋಧನೆಯಲ್ಲಿ ತೊಡಗಿದ್ದರು'–ಗೆರೆ ಎಳೆದ ಪದವು ಈ ವ್ಯಾಕರಣಾಂಶಕ್ಕೆ ಉದಾಹರಣೆಯಾಗಿದೆ.

ಎ) ರೂಢನಾಮ ಬಿ) ಅಂಕಿತನಾಮ

ಸಿ) ಅನ್ವರ್ಥನಾಮ ಡಿ) ಸರ್ವನಾಮ

೨) 'ಪರಿಮಾಣ ವಾಚಕ' ಪದಕ್ಕೆ ಉದಾಹರಣೆಯಾದ ಪದವಿದು.

ಎ) ಯಾರು ಬಿ) ತಾನು

ಸಿ) ಹಲವು ಡಿ) ಎಂತಹ

೩) 'ಮಳೆಯಲ್ಲಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ

ಎ) ಲೋಪಸಂಧಿ ಬಿ) ಆಗಮಸಂಧಿ

ಸಿ) ಗುಣಸಂಧಿ ಡಿ) ಆದೇಶಸಂಧಿ

೪) 'ಹೆಮ್ಮರ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.

ಎ) ತತ್ಪುರುಷ ಸಮಾಸ ಬಿ) ಕರ್ಮಧಾರಯ ಸಮಾಸ

ಸಿ) ಅಂಶಿ ಸಮಾಸ ಡಿ) ಗಮಕ ಸಮಾಸ

೫) 'ಚೆಂಡು ಮೇಲಕ್ಕೆ ಹೋದೀತು'. ಈ ವಾಕ್ಯದಲ್ಲಿರುವ ಕ್ರಿಯಾಪದದ ರೂಪ

ಎ) ವಿಧ್ಯರ್ಥಕ ಬಿ) ನಿಷೇಧಾರ್ಥಕ

ಸಿ) ಸಂಭಾವನಾರ್ಥಕ ಡಿ) ಕ್ರಿಯಾರ್ಥಕ

೬) 'ರಾಮನ ದೆಸೆಯಿಂದ' ಈ ಪದದಲ್ಲಿರುವ ವಿಭಕ್ತಿ.

ಎ) ಪ್ರಥಮಾ ಬಿ) ತೃತೀಯ

ಸಿ) ಪಂಚಮೀ ಡಿ) ಷಷ್ಠೀ

II. ಕೆಳಗಿನವುಗಳಲ್ಲಿ ಮೊದಲೆರಡು ಪದಗಳಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧಿ ಪದವನ್ನು ಬರೆಯಿರಿ. **೪x೧=೪**

೭) ಓದು : ಸಕರ್ಮಕ ಧಾತು : : ಮಲಗು : ----------

೮) ತಿರೋಹಿತೆ : ಮಾಯವಾಗು : : ಲೋಚನ : ----------

೯) ಕಡ್ಡಿ ಕಡ್ಡಿ : ದ್ವಿರುಕ್ತಿ : ಹಾಲು–ಜೇನು : : ----------

೧೦) ತ್ರಿಪದಿ : ಮೂರು ಸಾಲಿನ ಪದ್ಯ : : ಷಟ್ಪದಿ : ----------

schools.aglasem.com

aglasem.com

III. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ. ೭x೧=೭

೧೧) ಬನದಮ್ಮನಹಳ್ಳಿಯ ಜನರು ಎಲ್ಲಿ ಪಂಚಾಯಿತಿ ಸೇರಿದ್ದರು?

೧೨) ಜಯಪುರದ ಪೂರ್ವದ ರಾಜಧಾನಿ ಯಾವುದು?

೧೩) ಕಷ್ಟಕಾಲದಲ್ಲಿ ಸಹಾಯಕ್ಕೆ ನಿಲ್ಲುವವನು ಯಾರು?

೧೪) ರಾಧಾಕೃಷ್ಣನ್ ಅವರ ಜನ್ಮದಿನವನ್ನು ಯಾವ ಹೆಸರಿನಿಂದ ಆಚರಿಸಲಾಗುತ್ತಿದೆ?

೧೫) ಮುದ್ದು ಪಾರಿವಾಳಗಳ ಜೋಡಿ ಎಲ್ಲಿ ಸಂಸಾರ ಹೂಡಿದ್ದವು?

೧೬) ಪರಶುರಾಮರಿಂದ ಶರವನ್ನು ಪಡೆದವರು ಯಾರು?

೧೭) ಪೋರ್ಚುಗೀಸರು ಚೆನ್ನಭೈರಾದೇವಿಗೆ ನೀಡಿದ್ದ ಬಿರುದು ಯಾವುದು?

IV. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೧೦x೨=೨೦

೧೮) ತಲಕಾಡಿನ ಲೂಟಿಯ ವಿಚಾರದಲ್ಲಿ ವಿಷ್ಣುವರ್ಧನನ ನಿಲುವೇನು?

೧೯) ಬನದಮ್ಮನ ಹಳ್ಳಿಯ ದೇವಾಲಯದ ಮುಂದೆ ಯಾವ ವಿಚಾರವಾಗಿ ಚರ್ಚೆ ನಡೆದಿತ್ತು?

೨೦) ರಾಜ್ಯದ ಅಮಾತ್ಯರಲ್ಲಿ ಯಾವ ಗುಣಗಳಿರಬೇಕು?

೨೧) ರಾಧಾಕೃಷ್ಣನ್ ಅವರ ವೇಷಭೂಷಣಗಳ ಬಗ್ಗೆ ಬರೆಯಿರಿ.

೨೨) ಭೀಷ್ಮರು ಕ್ರೋಧಗೊಳ್ಳಲು ಕಾರಣವೇನು?

೨೩) ಭೂಮಿಯ ನಾಲ್ಕು ದಿಕ್ಕುಗಳಲ್ಲಿ ತಲ್ಲಣವುಂಟಾಯಿತು. ಏಕೆ?

೨೪) ಪುಟ್ಟಹಕ್ಕಿ ಗೂಡನ್ನು ಹೇಗೆ ಕಟ್ಟುತ್ತದೆ?

೨೫) ಶಬಲೆ ಹೇಳಿದಂತೆ ಪೋರ್ಚುಗೀಸರು ಯಾವ ಕಾರಣಗಳಿಗಾಗಿ ಯುದ್ಧಕ್ಕೆ ಸಿದ್ಧರಾಗಿದ್ದರು?

೨೬) ಬೇರೆ ಬೇರೆ ಭಾಷಿಕರು ತನ್ನ ಕೃತಿಯನ್ನು ಹೇಗೆ ಹೊಗಳಬೇಕೆಂದು ಕವಿ ರತ್ನಾಕರವರ್ಣಿ ಬಯಸುವನು?

೨೭) ಭರತ ಚಕ್ರವರ್ತಿ ಓಲಗ ಮಂಟಪವನ್ನೇರಿದ ಸಂದರ್ಭವನ್ನು ಬಣ್ಣಿಸಿ.

V. ಕೆಳಗಿನ ಕವಿಗಳ/ಸಾಹಿತಿಗಳ ಸ್ಥಳ, ಕಾಲ, ಕೃತಿಗಳು ಮತ್ತು ಬಿರುದು/ಪ್ರಶಸ್ತಿಗಳನ್ನು ವಾಕ್ಯರೂಪದಲ್ಲಿ ಬರೆಯಿರಿ. ೨x೩=೬

೨೮) ಕಯ್ಯಾರ ಕಿಞ್ಞಣ್ಣ ರೈ

೨೯) ಸಾ.ಶಿ.ಮರುಳಯ್ಯ

VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗಮಾಡಿ ಛಂದಸ್ಸಿನ ಹೆಸರನ್ನು ಬರೆಯಿರಿ. ೧x೩=೩

೩೦) ಗುರುವಿಂದು ಬೆಸಸೆ ಭಿಕ್ಷೆಗೆ

ಬರುತಿರೆ ಪಿಡಿತಂದರೆಮ್ಮನಾ ಬೆಸೆಗೆ ಭಯಂ

VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣವನ್ನು ಬರೆದು ಸಮನ್ವಯಗೊಳಿಸಿ. ೧x೩=೩

೩೧) ಬಾನಿನಲ್ಲಿ ಗಾಳಿಪಟಗಳು ಹಕ್ಕಿಗಳಂತೆ ಹಾರಾಡುತ್ತಿದ್ದವು.

VII. ಕೆಳಗಿನ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ವದೊಂದಿಗೆ ವಿಸ್ತರಿಸಿ ಬರೆಯಿರಿ. ೧x೩=೩

೩೨) ತುರಬಿದ ಕೊಡ ತುಳುಕುವುದಿಲ್ಲ **ಅಥವಾ** ಹಿತ್ತಲಗಿಡ ಮದ್ದಲ್ಲ

schools.aglasem.com

aglasem.com

IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. ೬x೩=೧೮

೩೩) "ಪ್ರಾಚೀನ ಗುಡಿಗೋಪುರಗಳು ಗೂಬೆಯ ಮನೆಗಳಾಗಿದ್ದವು"

೩೪) "ಮಾನವತೆಯೇ ವಿಶ್ವ ಅನುಸರಿಸಬೇಕಾದ ಮಾರ್ಗ"

೩೫) "ಸಾವಿರ ಮೂರ್ಖರಿಗಿಂತಲೂ ಒಬ್ಬ ಪಂಡಿತ ಲೇಸು"

೩೬) "ಮೋಹ ಮುಸುಕಿದ ಬುದ್ಧಿ ಸರ್ವನಾಶದ ಸಿದ್ಧಿ"

೩೭) "ತೃಣವ ಮುರಿವುದಕ್ಕೆ ಕೊಡಲಿಯು ಬೇಕೆ"

೩೮) "ನರಕದೊಳ್ ನಿವಾರಣೆವಡೆವಯ್"

X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ. ೧x೪=೪

೩೯) ನವಭಾವ.....

.....ವೀರಧ್ವನಿಯೇರಬೇಕು;

ಅಥವಾ

ಜಾತಿ–ಕುಲ .....

.....ಗುಡುಗಬೇಕು

XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶ ಬರೆಯಿರಿ.

೪೦) ಪ್ರಜೆಯೆಲ್ಲಂ ಜಲಗಂಧ ೧x೪=೪

ಸ್ರಜ ತಂಡುಲ ಧೂಪ ದೀಪ ಚರು ತಾಂಬೂಲ

ವ್ರಜದಿಂ ಪೂಜಿಸುವುದು ಜೀ–

ವಜಾತದಿಂದೆನಗೆ ಬಲಿಯನಿತ್ತೊಡೆ ಮುನಿವೆಂ

XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. ೨x೪=೮

೪೧) ಅಂಬೇರ ಬೆಟ್ಟದ ಮೂರು ಅಂತಸ್ತಿನ ಅರಮನೆಯ ಒಳಾಂಗಣ ಚೆಲುವನ್ನು ತಿಳಿ

ಅಥವಾ

ಜಂತ್ರ ಮಂತ್ರದ ವಿಶೇಷತೆಯನ್ನು ಪರಿಚಯ ಮಾಡಿಕೊಡಿ.

೪೨) ಜೋಡಿ ಪಾರಿವಾಳಗಳ ದುಡುಕಿನ ನಿರ್ಧಾರದ ಬಗ್ಗೆ ನಿಮ್ಮ ಅಭಿಪ್ರಾಯವೇನು?

ಅಥವಾ

'ಪಾರಿವಾಳ'ಪದ್ಯದ ಕಥೆಯನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.

XIII. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ. ೧x೪=೪(೨+೨)

ಒಮ್ಮೆ ಸ್ವಾಮಿ ವಿವೇಕಾನಂದರು ಅಮೇರಿಕಾದ ಚಿಕಾಗೊ ಪಟ್ಟಣದ ನದಿಯ ತೀರದಲ್ಲಿ ವಿಹರಿಸುತ್ತಿದ್ದರು. ಆಗ ಅವರಿಗೆ ಕೆಲವು ಹುಡುಗರು ಕೋವಿಯನ್ನು ಹಿಡಿದು ನದಿಯಲ್ಲಿ ತೇಲುತ್ತಿರುವ ಮೊಟ್ಟೆಯ ಚಿಪ್ಪಿನ ಮೇಲೆ ಗುರಿಯಿಡಲು ಪ್ರಯತ್ನಿಸುತ್ತಿರುವುದು ಕಂಡಿತು. ಅದರೆ ಅಲೆಗಳಿಂದ ಮೊಟ್ಟೆಯ ಚಿಪ್ಪು ಮೇಲೆ ಕೆಳಗೆ ತಿರುಗುತ್ತಿದ್ದರಿಂದ ಅವರಿಗೆ ಗುರಿಯಿಡಲು ಸಾಧ್ಯವಾಗಲಿಲ್ಲ. ಬಹಳಷ್ಟು ಬಾರಿ ಪ್ರಯತ್ನಿಸಿಯೂ ಅವರಿಂದ ಮೊಟ್ಟೆಯ ಚಿಪ್ಪಿನ ಮೇಲೆ ಗುರಿಯಿಡಲು

schools.aglasem.com

aglasem.com

ಸಾಧ್ಯವಾಗಲಿಲ್ಲ. ವಿವೇಕಾನಂದರು ಅವರ ಆಟವನ್ನು ಕೂತೂಹಲದಿಂದ ನಿಂತು ನೋಡುತ್ತಿದ್ದರು. ಆಗ ಹುಡುಗರು ಅವರನ್ನು ನೋಡಿ "ಸರ್, ನೀವು ನಮ್ಮನ್ನು ಆಗಿನಿಂದ ನೋಡುತ್ತಿದ್ದೀರಿ, ನೀವು ಒಂದು ಬಾರಿ ಪ್ರಯತ್ನಿಸುವಿರೇ?" ಎಂದು ಕೇಳಿದರು. ಸ್ವಾಮಿ ವಿವೇಕಾನಂದರು ನಗುತ್ತ ತಾನು ಪ್ರಯತ್ನಿಸಲು ಇಚ್ಛಿಸುವುದಾಗಿ ತಿಳಿಸಿದರು. ಅವರು ಬಂದೂಕನ್ನು ಕೈಗೆತ್ತಿಕೊಂಡು ಮೊಟ್ಟೆಯ ಚಿಪ್ಪಿಗೆ ಗುರಿಯಿಟ್ಟು ಅದನ್ನು ಸ್ವಲ್ಪ ಸಮಯ ಏಕಾಗ್ರತೆಯಿಂದ ನೋಡಿದರು. ಅನಂತರ ಅವರು ೧೨ ಬಾರಿ ಗುಂಡು ಹೊಡೆದಾಗ ಪ್ರತಿಬಾರಿಯೂ ಅದು ಒಂದೊಂದು ಮೊಟ್ಟೆಯ ಚಿಪ್ಪಿಗೆ ತಗುಲಿತು!

ವಿವೇಕಾನಂದರ ಕೌಶಲ್ಯವನ್ನು ಕಂಡು ಮಕ್ಕಳು ಅಚ್ಚರಿಗೊಂಡು ಸ್ವಾಮಿ ವಿವೇಕಾನಂದರ ಬಳಿ ಹೋಗಿ "ನೀವು ಇದನ್ನು ಹೇಗೆ ಮಾಡಿದಿರಿ?" ಎಂದು ಕೇಳಿದರು. ಅದಕ್ಕೆ ವಿವೇಕಾನಂದರು ನಗುತ್ತ "ನಾನು ಎಂದಿಗೂ ಬಂದೂಕಿನಿಂದ ಗುರಿ ಇಡಲಿಲ್ಲ"ಎಂದು ಹೇಳುತ್ತಾರೆ. ಆಗ ಹುಡುಗರು "ಹಾಗಿದ್ದರೆ ನೀವು ಇಷ್ಟು ಒಳ್ಳೆಯ ರೀತಿಯಲ್ಲಿ ಹೇಗೆ ಗುರಿ ಇಟ್ಟಿರಿ?" ಎಂದು ಕೇಳುತ್ತಾರೆ. ಅದಕ್ಕೆ ವಿವೇಕಾನಂದರು "ನಿಮಗೆ ಒಂದು ರಹಸ್ಯವನ್ನು ಹೇಳುತ್ತೇನೆ. ನೀವು ಏನೇ ಮಾಡಿದರೂ ಬೇರೆ ಯಾವುದರ ಬಗ್ಗೆಯೂ ಯೋಚಿಸದೇ ನಿಮ್ಮ ಸಂಪೂರ್ಣ ಗಮನವನ್ನು ಅದರ ಮೇಲೆ ಕೇಂದ್ರೀಕರಿಸಿರಿ. ನೀವು ಬಂದೂಕಿನಿಂದ ಗುರಿಯಿಡುತ್ತಿದ್ದಲ್ಲಿ ನಿಮ್ಮ ಮನಸ್ಸನ್ನು ಗುರಿಯ ಮೇಲೆ ಕೇಂದ್ರೀಕರಿಸಿರಿ. ನಿಮ್ಮ ಗುರಿ ತಪ್ಪುವುದಿಲ್ಲ. ಏಕಾಗ್ರತೆಯಿಂದ ಅದ್ಭುತಗಳನ್ನು ಸಾಧಿಸಬಹುದು. ನಾವು ಓದುವಾಗಲೂ ಕೈಯಲ್ಲಿರುವ ಪಾಠದ ಬಗ್ಗೆಯೇ ವಿಚಾರ ಮಾಡಬೇಕು. ಆಗಲೇ ನೀವು ಓದಿರುವ ವಿಷಯಗಳನ್ನು ಸುಲಭವಾಗಿ ನೆನಪಿನಲ್ಲಿಟ್ಟುಕೊಳ್ಳಬಹುದು". ಎಂದು ಹೇಳಿದರು.

೪೩) **ಪ್ರಶ್ನೆಗಳು:**

ಅ) ಸ್ವಾಮಿ ವಿವೇಕಾನಂದರು ಎಲ್ಲಿ ವಿಹರಿಸುತ್ತಿದ್ದರು?

ಆ) ವಿವೇಕಾನಂದರ ಪ್ರಕಾರ ಯಾವುದರಿಂದ ಅದ್ಭುತಗಳನ್ನು ಸಾಧಿಸಬಹುದು?

XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ. ೧x೫=೫

೪೪) ನಿಮ್ಮನ್ನು ಶಿವಮೊಗ್ಗದ ಕುವೆಂಪುನಗರದ ನಿವಾಸಿ ರಾಹುಲ್/ರಚನಾ ಎಂದು ಭಾವಿಸಿಕೊಂಡು ನಿಮ್ಮ ಬಡಾವಣೆಯಲ್ಲಿನ ಬೀದಿ ದೀಪಗಳನ್ನು ಸರಿಪಡಿಸಬೇಕೆಂದು ಕೋರಿ ಮಹಾನಗರ ಪಾಲಿಕೆಯ ಆಯುಕ್ತರಿಗೆ ಪತ್ರ ಬರೆಯಿರಿ.

ಅಥವಾ

ನಿಮ್ಮನ್ನು ಹೊಸಪೇಟೆಯ ಆದರ್ಶವಿದ್ಯಾಲಯದ ೯ನೆಯ ತರಗತಿಯ ವಿದ್ಯಾರ್ಥಿ 'ರಚಿತಾ'/ರವೀಶ ಎಂದು ಭಾವಿಸಿಕೊಂಡು, ಶಾಲಾ ಶೈಕ್ಷಣಿಕ ಪ್ರವಾಸಕ್ಕೆ ಹೋಗಲು ೫೦೦ ರೂಪಾಯಿ ಹಣ ಕಳುಹಿಸಿಕೊಡಬೇಕೆಂದು ಮೈಸೂರಿನ ಕೆ.ಆರ್.ನಗರದಲ್ಲಿರುವ ನಿಮ್ಮ ತಂದೆಗೆ ಪತ್ರ ಬರೆಯಿರಿ.

XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆ ಇಲ್ಲದಂತೆ ಪ್ರಬಂಧ ಬರೆಯಿರಿ

೪೫) ನಿರುದ್ಯೋಗ ಸಮಸ್ಯೆ **೧x೫=೫**

ಅಥವಾ

ರಾಷ್ಟ್ರೀಯ ಹಬ್ಬಗಳ ಮಹತ್ವ

schools.aglasem.com

AglaSem Earn while Learn Program. Send your papers and get paid.
Contact: support@aglasem.com aglasem.com

QUESTION PAPERS

GET PREVIOUS YEAR QUESTION PAPERS FOR ALL CLASSES FOR CBSE, ISCSE, ISC AND ALL ALL STATE BOARDS HERE AT AGLASEM.COM

BOARD WISE

- Andhra Pradesh Board Question Papers
- Assam Board Question Papers
- Bihar Board Question Papers
- Chhattisgarh Board Question Papers
- Goa Board Question Papers
- Gujarat Board Question Papers
- Haryana Board Question Papers
- Himachal Pradesh Board Question Papers
- J&K State Board Question Papers
- Jharkhand Board Question Papers
- Karnataka Board Question Papers
- Kerala Board Question Papers
- Madhya Pradesh Board Question Papers
- Maharashtra State Board Question Papers
- Manipur Board Question Papers
- Meghalaya Board Question Papers
- Mizoram Board Question Papers
- Nagaland Board Question Papers
- Orissa Board Question Papers
- Punjab Board Question Papers
- Rajasthan Board Question Papers
- Tamil Nadu Board Question Papers
- Telangana State Board Question Papers
- Tripura Board Question Papers
- Uttarakhand Board Question Papers
- Uttar Pradesh (UP) Board Question Papers
- West Bengal (WB) Board Question Papers